The Civil works Committee meeting of RIMS Raichur is held on 26-8-2009 at 4.P.M in the chambers of Dean/Director RIMS Raichur

The following members are Present in the meeting

1) Dean/Director & Principal RIMS Raichur. - chairman.

2) Medical Superintendent RIMS Teaching Hospital RIMS Raichur - member 26.8.09

3) Representative of Superintending - Engineer. - member.

4) C.A.O RIMS Raichur - Member Secretary.

## ದಿನಾಂಕ 26.08.2009 ರಂದು ನಿರ್ದೇಶಕರು, ರಿಮ್ಸ್, ರಾಯಚೂರು ಇವರ ಅಧ್ಯಕ್ಷತೆಯಲ್ಲಿ ಜರುಗಿದ ಕಟ್ಟಡ ಕಾಮಗಾರಿ ಸಮಿತಿ ಸಭೆಯಲ್ಲಿ ವಿಶ್ಲೇಷಿಸಿದ ನಡುವಳಿಗಳ ವಿವರ.

******

ಮಾನ್ಯ ನಿರ್ದೇಶಕರು, ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರು ಇವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು.

### ಸಭೆಯಲ್ಲಿ ಹಾಜರಿದ್ದ ಸದಸ್ಯರು

| ಕ್ರಮ ಸಂಖ್ಯೆ | ಸಭೆಯಲ್ಲಿ ಹಾಜರಿದ್ದ ಸದಸ್ಯರು | |
|---|---|---|
| 1 | ಡಾ. ರಾಮಯ್ಯ, ನಿರ್ದೇಶಕರು | ಅಧ್ಯಕ್ಷರು |
| 2 | ಡಾ. ಟಿ.ಎನ್ ನಟರಾಜ್, ವೈದ್ಯಕೀಯ ಅಧೀಕ್ಷಕರು | ಸದಸ್ಯರು |
| 3 | ನಾಗರಾಜ್ ಮೇಟಿ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ರಾಯಚೂರು | ಸದಸ್ಯರು |
| 4 | ಶ್ರೀ ಶಿವ ಕುಲಕರ್ಣಿ, ಮುಖ್ಯ ಆಡಳಿತಾಧಿಕಾರಿಗಳು, ರಿಮ್ಸ್, ರಾಯಚೂರು | ಸದಸ್ಯ ಕಾರ್ಯದರ್ಶಿ |

### ಸಭೆಯಲ್ಲಿ ನಿರ್ದೇಶಕರ ಸಮಕ್ಷಮದಲ್ಲಿ ತೆಗೆದು ಕೊಂಡ ನಿರ್ಣಯಗಳು ಈ ಕೆಳಗಿನಂತಿವೆ.

ಈ ಸಭೆಗೆ ಸಂಬಂಧ ಪಟ್ಟಂತೆ ಮುಖ್ಯ ಆಡಳಿತಾಧಿಕಾರಿಗಳು ಸಭೆಗೆ ವಿವರಗಳನ್ನು ನೀಡಿದರು.

1) ಈ ಸಂಸ್ಥೆಯಲ್ಲಿ ಒಟ್ಟು 130.02 ಎಕರೆ ಜಮೀನು ಹೊಂದಿದ್ದು ವಿವರ ಈ ಕೆಳಗಿನಂತಿದೆ.

| ಒಟ್ಟು ಜಮೀನಿನ ವಿವರ | | |
|---|---|---|
| ಸರ್ಕಾರಿ ಮೆಡಿಕಲ್ ಕಾಲೇಜು | ಜಮೀನು | ಒಡೆತನದ ರೀತಿ |
| ರಿಮ್ಸ ಜಿಲ್ಲಾ ಬೋಧಕ ಆಸ್ಪತ್ರೆ | 33.18 | ಸರ್ಕಾರದಿಂದ |
| ವೈದ್ಯಕೀಯ ಮಹಾವಿದ್ಯಾಲಯ | 30.04 | ಸರ್ಕಾರ (ಎ.ಪಿ.ಎಂ.ಸಿಯಿಂದ) |
| ಓಪೆಕ್ ಆಸ್ಪತ್ರೆ | 37.33 | ಸರ್ಕಾರ (ಎ.ಪಿ.ಎಂ.ಸಿಯಿಂದ ) |
| 1040 ಹಾಸಿಗೆಯುಳ್ಳ ಆಸ್ಪತ್ರೆ | 27.09 | ಭೂಸ್ವಾದಿನದ ಮುಖಾಂತರ |
| ಒಟ್ಟು | **130.02** | |

2) ಹಂತವಾರು ಕಟ್ಟಡ ಕಾಮಗಾರಿ ವೆಚ್ಚ ಈ ಕೆಳಗಿನಂತಿದೆ

| ಹಂತವಾರು ಕಟ್ಟಡ ಕಾಮಗಾರಿ ವೆಚ್ಚ | | | | | | | |
|---|---|---|---|---|---|---|---|
| ಹಂತ | ಆಡಳಿತಾತ್ಮಕ ಅನುಮೋದನೆ | ಗುತ್ತಿಗೆದಾರರು | ಇಐಆರ್ಎಲ್ + ವರ್ಕ ಸ್ಲಿಪ್ | ಎಸ್ಕಲೇಶನ್ | ಒಟ್ಟು | ಸರ್ಕಾರದ ಅನುದಾನ | ಬಾಕಿ |
| ಮೊದಲನೇ ಹಂತ | 20 ಕೋಟಿ | ಮೆ: ಹೈಯಗ್ರೀವ ಇಫ್ರಾಟೆಕ್ ಪ್ರಾಜೆಕ್ಟ್ ಲಿಮಿಟೆಡ್, ವಿಶಾಖಪಟ್ಟಣ | 2800.88 | 0.00 | 2807.00 | 2807.00 | 0.00 |
| ಎರಡನೇ ಹಂತ | 40 ಕೋಟಿ | | 4779.00 | 356.00 | 5135.00 | 4300.00 | 835.00 |
| ಒಟ್ಟು | | | | 356.00 | 7935.88 | 7107.00 | 835.00 |

## ಭಾರತೀಯ ವೈದ್ಯಕೀಯ ಮಂಡಳಿಯ 3ನೇ ನವೀಕರಣಕ್ಕಾಗಿ 2010-11 ನೇ ಸಾಲಿನ


## ಅನುಮತಿಗೆ ಈಗಾಗಲೇ ಹೊಂದಿರುವ ಕಟ್ಟಡ / ಕಾಮಗಾರಿಗಳ ವಿವರ

ಅ) ಈಗಾಗಲೇ ಪೂರ್ಣಗೊಂಡಿರುವ ಕಟ್ಟಡಗಳು ಈ ಕೆಳಗಿನಂತಿವೆ.


| ಕ್ರಮ ಸಂಖ್ಯೆ | ಹಾಲಿ ಇರುವ ಕಟ್ಟಡಗಳ ವಿವರ | ವೆಚ್ಚ ಲಕ್ಷಗಳಲ್ಲಿ | ಮಹಡಿಗಳು | ವಿಸ್ತೀರ್ಣ ಚ.ಮೀ | ಸೌಲಭ್ಯ |
|---|---|---|---|---|---|
| 1 | ಮಹಾವಿದ್ಯಾಲಯ (30 ಎಕರೆ 04 ಗುಂಟಾ) | 7107 | G + 3 | 21,750 | * |
| 2 | ವೈದ್ಯರ ವಸತಿ ಗೃಹಗಳು | | G + 5 | 5,112 | 48 ವಸತಿ ಗೃಹ |
| 3 | ವಿದ್ಯಾರ್ಥಿಗಳ ವಸತಿ ಗೃಹಗಳು | | G + 5 | 7,524 | 164 ವಿದ್ಯಾರ್ಥಿಗ ಗೃಹಗಳು |
| 4 | ವಿದ್ಯಾರ್ಥಿನಿಯರ ವಸತಿ ಗೃಹಗಳು | | G + 5 | 7,524 | 164 ವಿದ್ಯಾರ್ಥಿಗ ಗೃಹಗಳು |
| 5 | ಕ ವರ್ಗದ ಸಿಬ್ಬಂಧಿ ವಸತಿ ಗೃಹಗಳು | | G + 8 | 2,632 | 32 ವಸತಿ ಗೃಹ |
| 6 | ಡ ವರ್ಗದ ಸಿಬ್ಬಂಧಿ ವಸತಿ ಗೃಹಗಳು | | G + 8 | 2,016 | 32 ವಸತಿ ಗೃಹ |
| 7 | ಸಭಾಂಗಣ | | | 1.360 | |
| | | | | 46,694 ಚ.ಮೀ | |
| | ನೂತನ ಆಸ್ಪತ್ರೆಯ ಕಟ್ಟಡ ಪ್ರಗತಿ ಹಂತದಲ್ಲಿದೆ | | | | |
| 8 | ರಿಮ್ಸ್ ಜಿಲ್ಲಾ ಬೋಧಕ ಆಸ್ಪತ್ರೆ (33 ಎಕರೆ 18 ಗುಂಟಾ) | | G + 1 | | ಹಳೆಯ ಜಿಲ್ಲಾ |
| 9 | ಅ) 430 ಹಾಸಿಗೆಯುಳ್ಳ ಆಸ್ಪತ್ರೆ ಬ್ಲಾಕ್ ಎ (ಬ್ಲಾಕ್ ಎ+ ಬಿ 27 ಎಕರೆ 09 ಗುಂಟಾ) | 1420 (ಭೂ.ಸ್ವಾ.ವೆಚ್ಚ 0234 | G + 6 | 23804 | 430 ಹಾಸಿಗೆಯುಳ ಪ್ರಗತಿಯಲ್ಲಿ ಆಸ್ಪತ್ರೆ ಬಿ ಬ್ಲಾಕ ಮುಂದಿನ ವ ಉದ್ದೇಶಿಸಿದ |
| | ಆ) 520 ಹಾಸಿಗೆಯುಳ್ಳ ಆಸ್ಪತ್ರೆ ಬ್ಲಾಕ್ ಬಿ | | G + 6 | 23804 | |
| | | | | 47.608 ಚ.ಮೀ | |
| | ಸರ್ಕಾರದಿಂದ ನಿರ್ಮಿಸಲ್ಪಟ್ಟ ರಾಜೀವ್ ಗಾಂಧಿ ಸುಪರ್ ಸ್ಪೆಷಾಲಿಟಿ ಓಪೆಕ್ ಆಸ್ಪತ್ರೆಯನ್ನು ಪಡೆಯುವ ಬಗ್ಗೆ | | | | |
| 10 | ಓಪೆಕ್ ಆಸ್ಪತ್ರೆ 37 ಎಕರೆ 33 ಗುಂಟಾ | ಅಪೋಲೋ ಖಾಸಗಿ ಸಂಸ್ಥೆಯಿಂದ ಓಪೆಕ್ ಆಸ್ಪತ್ರೆಯನ್ನು ಮರಳಿ ಪಡೆಯುವುದು | | | 350 ಹಾಸಿಗೆಯುಳ್ಳ |
| | ಒಟ್ಟು 130 ಎಕರೆ 02 ಗುಂಟಾ | | | | |

* ಟಿಪ್ಪಣಿ: - ಈ ವೈದ್ಯಕೀಯ ಮಹಾ ವಿದ್ಯಾಲಯದಲ್ಲಿ 8 ವಿಭಾಗಗಳಿವೆ, 13 ವಿಭಾಗಗಳು ಬೋಧಕ ಆಸ್ಪತ್ರೆಯಲ್ಲಿವೆ. 4 ಬ ಕೊಠಡಿಗಳು, 2 ಪರೀಕ್ಷಾ ಕೊಠಡಿಗಳು, ನಿರ್ದೇಶಕರ ಕಛೇರಿ, ಮುಖ್ಯ ಆಡಳಿತಾಧಿಕಾರಿಗಳ ಕಛೇರಿ , ಆರ್ಥಿಕ ಸಲಹೆಗಾರರ ಕಛೇರಿ, ಆಡಳಿತ 8 ವಿಭಾಗಗಳಿಗೆ ಪ್ರಯೋಗಶಾಲೆಗಳು ಎಲ್ಲಾ ವಿಭಾಗದ ಮುಖ್ಯಸ್ಥರಿಗೆ & ಇತರ ಬೋಧಕ ಸಿಬ್ಬಂದಿಯವರಿಗೆ ಕೊಠಡಿಗಳ ಸೌಲಭ್ಯವಿದೆ. ಉಪನ್ಯಾಸ ಕೊಠಡಿಗಳನ್ನು ಉಪಯೋಗ ಮಾಡುತ್ತಿದ್ದು, ಇನ್ನು ಮೂರು ಹಾಲ್ ಗಳು ಮತ್ತು ಎರಡು ಪರೀಕ್ಷಾ ಕೊಠಡಿಗೆ ಪೀಠೋಪಕರ ಸಿದ್ದತೆ ನೆಡೆಯುತ್ತಿದೆ.

ವಿದ್ಯಾರ್ಥಿಗಳ ವಸತಿ ನಿಲಯ / Boys Hostel



ವಿದ್ಯಾರ್ಥಿನಿಯರ ವಸತಿ ನಿಲಯ /Ladies Hostel



ಮಹಾವಿದ್ಯಾಲಯದ ಸಿಬ್ಬಂದಿಗಳ ವಸತಿ ನಿಲಯ /College Staff Quarters



ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧಕ ಆಸ್ಪತ್ರೆ / RIMS Teaching Hospital



ಒಂದನೇ ಹಂತದ ಕಾಮಗಾರಿಯಲ್ಲಿ 20 ಕೋಟಿ ಆಡಳಿತಾತ್ಮಕ ಮತ್ತು ತಾಂತ್ರಿಕ ಅನುಮತಿ ಇದ್ದು ಹೆಚ್ಚಿನ ವಸ್ತುಗಳ ದರಪಟ್ಟಿ, ಕಾರ್ಯಹೆಚ್ಚಳ ಮತ್ತು ಬೆಲೆ ಏರಿಕೆ ಸೇರಿ 28 ಕೋಟಿ ವೆಚ್ಚವಾಗಿರುತ್ತದೆ. ಎರಡನೇ ಹಂತದ ಹೆಚ್ಚಿನ ಕಾಮಗಾರಿಯಲ್ಲಿ 40 ಕೋಟಿ ಆಡಳಿತಾತ್ಮಕ ಮತ್ತು ತಾಂತ್ರಿಕ ಅನುಮತಿಯಿದ್ದು, ಗುತ್ತಿಗೆ ಮೊತ್ತ ಹೆಚ್ಚಳ ವಸ್ತುಗಳ ದರಪಟ್ಟಿ, ಕಾರ್ಯ ಹೆಚ್ಚಳ & ಬೆಲೆ ಏರಿಕೆ ಸೇರಿ 52 ಕೋಟಿ. ಹೀಗೆ 60 ಕೋಟಿ ಮೂಲ ಅಂದಾಜಿಗೆ ಸುಮಾರು 80 ಕೋಟಿಯಷ್ಟು ವೆಚ್ಚವಾಗಿದ್ದು ಈ 20 ಕೋಟಿ ಹೆಚ್ಚಳಕ್ಕೆ ವಿವರಗಳನ್ನು ಕೇಳಲಾಯಿತು. ಇದಕ್ಕೆ ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯ ಪಾಲಕ ಅಭಿಯಂತರರು ಮೂಲ ಅಂದಾಜು ಪಟ್ಟಿ ಪ್ರಕಾರ ಇದ್ದ ವಸ್ತುಗಳು ಅಂದರೆ ಹಾಸಿಗೆ ಕಲ್ಲುಗಳು, ಕಿಟಕಿ ಸರಳುಗಳು, ಸಿಮೆಂಟ್ ಮಿಶ್ರಣಗಳಲ್ಲಿ ವ್ಯತ್ಯಾಸ, ವಿನ್ಯಾಸದಲ್ಲಿ ಬದಲಾವಣೆ, ಬೆಲೆ ಹೆಚ್ಚಳ, ಕಪ್ಪು ಜವಳು ಏರೆಮಣ್ಣಿನಲ್ಲಿ ಬುನಾದಿಗೆ ಹೆಚ್ಚಾದ ಕಾಮಗಾರಿಗಳಿಂದಾಗಿ ವೆಚ್ಚವಾಗಿದೆ. ಈ ಎಲ್ಲಾ ಹೆಚ್ಚುವರಿ ವೆಚ್ಚಕ್ಕೆ ಸಂಬಂಧಿಸಿದ ಪ್ರಾಧಿಕಾರದಿಂದ ಮಂಜೂರಿ ದೊರೆತು ಸರ್ಕಾರಕ್ಕೆ ವರದಿ ಮಾಡಿದೆ. ಮತ್ತು ಗುಣಮಟ್ಟ ನಿಯಂತ್ರಣಕ್ಕೆ ಪ್ರಯೋಗಶಾಲೆ ಹೊಂದಿದ್ದು ಇಲ್ಲಿ ಪರೀಕ್ಷೆ ಮಾಡುತ್ತಿದ್ದು ಹಾಗು ತಾಂತ್ರಿಕ ಕಾಲೇಜಿನಿಂದ ಪರಿಕ್ಷೆ ಮಾಡಲಾಗುತ್ತಿದೆ. ಗುಣಮಟ್ಟ ನಿಯಂತ್ರಣಕ್ಕೆ ಲೋಕೋಪಯೋಗಿ ಇಲಾಖೆಯ ಪ್ರತ್ಯೇಕ ವಿಭಾಗವಿದೆ ಎಂದು ಲೋಕೋಪಯೋಗಿ ಅಭಿಯಂತರರು ವಿವರಿಸಿದರು. ಆದರೆ ಸದರಿ ವೆಚ್ಚ ಹೆಚ್ಚಳಕ್ಕೆ ಸಮರ್ಪಕವಾದ ವಿವರಣೆಯ ಹಾಗು ಗುಣಮಟ್ಟಗಳ ಕುರಿತು ಕೆಳಗೆ ವಿವರಿಸಿದಂತೆ ಈ ರೀತಿ ಇದೆ.

- **ಮೊದಲನೇ ಹಂತದ ಕಾಮಗಾರಿಗಳು :** ಈ ಹಂತದ ಎಲ್ಲಾ ಕಾಮಗಾರಿಗಳು ಮುಗಿದಿದ್ದು, ಸದರಿ ಕಟ್ಟಡವನ್ನು ದಿನಾಂಕ 17.08.2007 ರಂದು ರಿಮ್ಸ್ ಸಂಸ್ಥೆಗೆ ಹಸ್ತಾಂತರಿಸಲಾಯಿತು.
- **ಎರಡನೇ ಹಂತದ ಕಾಮಗಾರಿಗಳು :** ಸದರಿ ಕಾಮಗಾರಿಯು ರೂ. 36.85 ಕೋಟಿಗಳಿಗೆ ಸಿವಿಲ್ ಕಾಮಗಾರಿಗಳಿಗೆ ಟೆಂಡರ್ ಕರೆದು ಅತೀ ಕಡಿಮೆ ದರಗಳನ್ನು ನಮೂದಿಸಿದ ಮೆ: ಹೈಯಗ್ರೀವ ಇನ್ ಫ್ರಾಟೆಕ್ ಲಿ., ವಿಶಾಖಪಟ್ಟಣ, ಇವರಿಗೆ ದೊರಕಿರುತ್ತದೆ. ಸದರಿ ಕಾಮಗಾರಿಗೆ ರೂ. 40.00 ಕೋಟಿಗಳಿಗೆ ಅಂದಾಜು ಪತ್ರಿಕೆಯನ್ನು ಸಲ್ಲಿಸಲಾಗಿತ್ತು. ಅದರಂತೆ ಆಡಳಿತ್ಮಾತಕ ಮಂಜೂರಾತಿ ಪಡೆಯಲಾಗಿರುತ್ತದೆ. ಈ ಕಾಮಗಾರಿಗೆ ಹೆಚ್ಚಿನ ಟೆಂಡರ್ ಪ್ರೀಮಿಯಮ್ ನಿಂದಾಗಿ (ಶೇ. 19.90) ರೂ. 7.79 ಕೋಟಿಗಳಷ್ಟು ಹೆಚ್ಚಾಗಿರುವುದಕ್ಕೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅನುಮೋದನೆ ನೀಡಿರುತ್ತದೆ. ಕಾಮಗಾರಿಗಳನ್ನು ನಿರ್ವಹಿಸುವಾಗ ಸ್ಥಳ ವಾಸ್ತವಿಕತೆ ಹಾಗು ಕಟ್ಟಡ ವಿನ್ಯಾಸದಲ್ಲಿ ಆದ ಬದಲಾವಣೆಯಿಂದ ಹಾಗು ಎಂ.ಸಿ.ಐ ನಿಯಮಾವಳಿ ಪ್ರಕಾರ, ಮತ್ತು ಅಂದಾಜು ಪತ್ರಿಕೆಯಲ್ಲಿ ಬಾಕಿ ಉಳಿದ ವಿದ್ಯುತ್ ಕಾಮಗಾರಿಗಳಿಗಾಗಿ ಇಡಿಗಂಟಿನ ಪ್ರಸ್ತಾವನೆ ಮಾಡಿದ ಕಾರಣ, ಇಎಲ್‌ಆರ್‌ಎಲ್ ಹಾಗು ವರ್ಕಸ್ಲಿಪ್‌ಗಳಿಂದಾಗಿ ರೂ. 3.20 ಕೋಟಿಗಳು ಹೆಚ್ಚಾಗಿ ಆಗಿರುತ್ತವೆ. ಈ ಎಲ್ಲಾ ಕಾರಣಗಳಿಂಧ ಕಟ್ಟಡಗಳ ಬೆಲೆ ಹೆಚ್ಚಾಗಿರುತ್ತದೆ.

ಮುಂದುವರೆದು ಟೆಂಡರ್ ಗುತ್ತಿಗೆ ಕರಾರು ಒಪ್ಪಂದದ ಪ್ರಕಾರ ಕ್ಲಾಜ – 44 ರಂತೆ ಎಸಕಲೇಶನ್ ಮೊತ್ತವನ್ನು ಗುತ್ತೇದಾರರಿಗೆ ಅವಶ್ಯಕವಾಗಿ ಸಂದಾಯ ಮಾಡಬೇಕಾಗುತ್ತದೆ. ಇದರಿಂದಲೂ ಸಹ ಕಟ್ಟಡದ ಬೆಲೆಯಲ್ಲಿ ಹೆಚ್ಚಳ ಉಂಟಾಗಿರುತ್ತದೆ.

- **ಗುಣಮಟ್ಟ ವರದಿ :**

ಅ) ಕೆಲಸದ ಗುಣಮಟ್ಟವನ್ನು ಕಾಪಾಡಿ ಕೊಂಡು ಬರಲು, ಸದರಿ ಆಸ್ಪತ್ರೆ ಅವರಣದಲ್ಲಿ ಪ್ರಯೋಗ ಶಾಲೆಯನ್ನು ಹೊಂದಲಾಗಿದ್ದು ಇದರಲ್ಲಿ ಕಾಂಕ್ರಿಟ್, ಉಸುಕು ಹಾಗು ಇನ್ನಿತರೆ ಕಟ್ಟಡದ ಸಾಮಾಗ್ರಿಗಳನ್ನು ಕಾಲಕಾಲಕ್ಕೆ ಪರೀಕ್ಷೆ ಮಾಡಲಾಗುವುದು.

ಆ) ಸ್ಟೀಲ್ ಪರಿಮಾಣಕ್ಕೆ ಅನುಸಾರ ಕಾಲಕಾಲಕ್ಕೆ ತಾಂತ್ರಿಕ ವಿದ್ಯಾಲಯ ರಾಯಚೂರು ಹಾಗು ಕರ್ನಾಟಕ ಟೆಸ್ಟ್ ಹೌಸ್ ಬೆಂಗಳೂರುನಿಂದ ಗುಣಮಟ್ಟವನ್ನು ಪರೀಕ್ಷಿಸಿ ಉಪಯೋಗಿಸಲಾಗುವುದು.

ಇ) ರೆಡಿ ಮಿಕ್ಸ್ ಕಾಂಕ್ರಿಟ್ ಬೇಕಾದ ಮಿಕ್ಸ್ ಡಿಸೈನ ಪರಿಮಾಣವನ್ನು ಸಿವಿಲ್ ಏಡ್ ಬೆಂಗಳೂರು ಇವರಿಂದ ಪಡೆದುಕೊಂಡು ಕಾಂಕ್ರಿಟ್ ಕೆಲಸವನ್ನು ನಿರ್ವಹಿಸಲಾಗುವುದು.

ಈ) ಗುಣಮಟ್ಟದ ನಿಯಂತ್ರಕ್ಕಾಗಿ ಕಾಲಕಾಲಕ್ಕೆ ಸಹಾಯಕ ಕಾರ್ಯಪಾಲಕ ಅಭಿಯಂತರರು, ಗುಣಮಟ್ಟ ನಿಯಂತ್ರಣ ಉಪವಿಭಾಗ, ಬಳ್ಳಾರಿ ಪರಿವೀಕ್ಷಣೆ ಮಾಡಿ ಕೆಲಸಕ್ಕೆ ಉಪಯೋಗಿಸಿದ ಕಾಂಕ್ರೀಟ್ ಘನಗಳು, ಸಿಮೆಂಟ್, ಉಸುಕು ಹಾಗು ಜೆಲ್ಲಿಯನ್ನು ಪರೀಕ್ಷಿಸಿ ಮಾಡಿ ಫಲಿತಾಂಶಗಳನ್ನು ಆಗಾಗ್ಗೆ ನೀಡಿರುತ್ತಾರೆ.

ಇದೇ ರೀತಿ ಗುಣಮಟ್ಟದ ನಿಯಂತ್ರಣಕ್ಕಾಗಿ, ಕಾರ್ಯನಿರ್ವಾಹಕ ಅಭಿಯಂತರರು, ಗುಣಮಟ್ಟ ನಿಯಂತ್ರಣ ವಿಭಾಗ ಗುಲ್ಬರ್ಗಾ ಅಧೀಕ್ಷಕ ಅಭಿಯಂತರರು ಗುಣಮಟ್ಟ ವೃತ್ತ ಧಾರವಾಡ ಇವರುಗಳ ಸಹ ಪರಿವೀಕ್ಷಣೆ ಮಾಡಿ ಮಾರ್ಗದರ್ಶನ ನೀಡುತ್ತಿರುತ್ತಾರೆ. ಅಂತಿಮ ಎಲ್ಲಾ ಕಾಮಗಾರಿ ಮುಕ್ತಾಯವಾದ ಮೇಲೆ ಅಧೀಕ್ಷಕ ಅಭಿಯಂತರರು ಗುಣಮಟ್ಟ ನಿಯಂತ್ರಣ ವೃತ್ತ ಧಾರವಾಡ ಅಂತಿಮ ಗುಣಮಟ್ಟ ಪ್ರಮ ಪತ್ರವನ್ನು ನೀಡುತ್ತಾರೆ.

ಸದರಿ ಎರಡನೇ ಹಂತದ ಕಾಮಗಾರಿಗಳ ಹೆಚ್ಚಿನ ವಸ್ತುಗಳ ದರಪಟ್ಟಿ (ಇಐಆರ್ಎಲ್) ಹಾಗು ಹೆಚ್ಚಳದ ಕಾಮಗಾರಿ (ವರ್ಕ್‌ಸ್ಲಿ ಬೆಲೆ ಹೆಚ್ಚಳ ಪ್ರಸ್ತಾವನೆಯನ್ನು ಈಗಾಗಲೇ ಮಾನ್ಯ ಮುಖ್ಯ ಅಭಿಯಂತರರು, ಧಾರವಾಡ (ಉತ್ತರ) ಇವರ ಮುಖಾಂತರ ಸರ್ಕಾರಕ್ಕೆ ಸಲ್ಲಿಸಲಾಗಿ ಸರ್ಕಾರದಿಂದ ಅನುಮೋದನೆ ಕಾಯ್ದಿರಿಸಲಾಗಿದೆ.

❖ **500 ಹಾಸಿಗೆಯ ಹೊಸ ಜಿಲ್ಲಾ ವೈದ್ಯಕೀಯ ಆಸ್ಪತ್ರೆ:**

ಸದರಿ ಕಾಮಗಾರಿಯು ಸರ್ಕಾರಿ ಆದೇಶ ಪತ್ರ ಸಂಖ್ಯೆ /ಹೆಚ್‌ಎಸ್ಡಬ್ಲೂಡಿ / 266 / ಎಂಪಿಎಸ್ 2006 / ಬೆಂಗಳೂರು ದಿನಾ 07.07.2006 ರೂ. 40.00 ಕೋಟಿಗಳಿಗೆ ಆಡಳಿತಾತ್ಮಕ ಮಂಜೂರಾತಿ ಪಡೆಯಲಾಗಿತ್ತು, ಮುಂದುವರೆದು ರೂ. 35.24 ಕೋಟಿಗಳ ಮೊತ್ತಕ್ಕೆ ಸಿವಿಲ್ ಕಾಮಗಾರಿಗಳಿಗಾಗಿ ಟೆಂಡರ್ ಕರೆದು ಅತೀ ಕಡಿಮೆ ಮೊತ್ತ ರೂ. 40.35 ಕೋಟಿಗಳಿಗೆ ಕಾಮಗಾರಿಯನ್ನು ನಿರ್ವಹಿಸಲು ಮೆ: ಹ್ಯಯಗ್ರೀವ ಇನ್ ಫ್ರಾಟೆಕ್ ಲಿಂ., ವಿಶಾಖಪಟ್ಟಣ, ಇವರಿಗೆ ಗುತ್ತಿಗೆ ನೀಡಲಾಯಿತು. ಸದರಿ ಅನುಮೋದನೆಗೊಂಡ ಅಂದಾಜು ಪತ್ರಿಕೆಯಲ್ಲು ಬ್ಲಾಕ್ – ಎ ಕಟ್ಟಡ ಮಾತ್ರ ಅವಕಾಶ ಕಲ್ಪಿಸಲಾಗಿದ್ದು ಇದರಲ್ಲಿ ( ಜಿ + 4) ಮಹಡಿಗಳಿರುತ್ತವೆ. ಕಾಮಗಾರಿಯನ್ನು ನಿರ್ವಹಿಸುವಾಗ ಸ್ಥಳದ ವಾಸ್ತವಿಕತೆ ಹಾಗು ವಿನ್ಯಾಸದಲ್ಲಿ ಆದ ಬದಲಾವಣೆ ಮತ್ತು ಎಂಸಿಐ ನಿಯಮಾವಳಿ ಪ್ರಕಾರ ಕಟ್ಟಡದ ವಿನ್ಯಾಸ ಬದಲಾವಣೆಗೊಂಡಿತ್ತು. ಈ ನವೀಕರಿಸಿದ ನೀಲಿ ನಕ್ಷೆಗಳ ಬದಲಾವಣೆಯಿಂದಾಗಿ ಹೆಚ್ಚಿನ ವಸ್ತು ದರಪಟ್ಟಿ (ಇಐಆರ್ಎಲ್) ಹಾಗು ಹೆಚ್ಚಳವಾದ ಕಾಮಗಾರಿ (ವರ್ಕ್ ಸ್ಲಿಪ್) ಉದ್ಭವವಾಗಿದ್ದು ಇದರಿಂದ ಮೂಲ ಅಂದಾಜು ಪತ್ರಿಕೆಗಿಂತಲೂ ರೂ. 7.65 ಕೋಟಿಗಳು ಹೆಚ್ಚುವರಿಯಾಗಿರುತ್ತದೆ. ಬದಲಾವಣೆಗಿಂತ ನೀಲಿ ನಕ್ಷಗಳಿಗೆ ಕಟ್ಟಡದ ವಿನ್ಯಾಸಕ್ಕೆ ನಿರ್ದೇಶಕರು, ವೈದ್ಯಕೀಯ ಶಿಕ್ಷಣ, ಬೆಂಗಳೂರು ಇವರಿಂದ ಮೇಲು ರುಜು ಪಡೆದು, ಮುಖ್ಯ ಇಂಜನಿಯರು, ಧಾರವಾಡ (ಉತ್ತರ) ಇವರಿಂದ ಅನುಮತಿ ಪಡೆಯಲಾಗುತ್ತದೆ. ಈ ಪ್ರಸ್ತಾವನೆಯನ್ನು ಮುಖ್ಯ ಅಭಿಯಂತರರು ಧಾರವಾಡ (ಉತ್ತರ) ಮುಖಾಂತರ ಸರ್ಕಾರಕ್ಕೆ ಮಂಜೂರಾತಿಗಾಗಿ ಸಲ್ಲಿಸಲಾಗಿದೆ. ಮುಂದುವರೆದು ಬ್ಲಾಕ್ ಎ ಕಟ್ಟಡ ಎಂಸಿಐ ಪ್ರಕಾರ ಸಂಪೂರ್ಣಗೊಳ್ಳಲು 5 ಮತ್ತು 6 ಮಹಡಿಗಳು ಮತ್ತು ಇತರ ಕಾಮಗಾರಿಗಳ ಅತಿ ಅವಶ್ಯವಿರುತ್ತದೆ.

3. ಉದ್ದೇಶಿತ ಕಾಮಗಾರಿಗಳನ್ನು ಭಾರತೀಯ ವೈದ್ಯಕೀಯ ಪರಿಷತ್ತಿನ ನಿಯಮ ಪ್ರಕಾರ ಹಾಗು ಸಂಸ್ಥೆಯ ಬೇಡಿಕೆ ಪ್ರಕಾರ ಇದ್ದು ಇವುಗಳನ್ನು ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರರು ವಿವರಿಸಿದರು ಇವುಗಳು ಈ ಮುಂದೆ ವಿವರಿಸಿದಂತಿದೆ.


ಭಾರತೀಯ ವೈದ್ಯಕೀಯ ಮಂಡಳಿಯ ನಿಯಮಾವಳಿಯಂತೆ ರಾಯಚೂರು ವೈದ್ಯಕೀಯ ಮಹಾವಿದ್ಯಾಲಯದ ಎರಡನೇ ಹಂತದ ಎಲ್ಲಾ ಕಾಮಗಾರಿಗಳು ಮುಗಿಯಲು (ಲೋಕೋಪಯೋಗಿ ಇಲಾಖೆ ವರದಿಯನ್ನು ಆಧರಿಸಿ) ಈ ಕೆಳಕಂಡ ಹೆಚ್ಚಿನ ಅನುದಾನದ ಅವಶ್ಯಕತೆಯಿದೆ. ಈ ಹೆಚ್ಚಿನ ಕೆಳಕಂಡ ಅನುದಾನ ಒದಗಿಸಿದಲ್ಲಿ ಎರಡನೇ ಹಂತದ ಎಲ್ಲಾ ಕಾಮಗಾರಿಗಳು ಪೂರ್ಣಗೊಳ್ಳುತ್ತವೆ.

| ಕ್ರಮ ಸಂಖ್ಯೆ | ಹೆಚ್ಚಿನ ಅನುದಾನದಲ್ಲಿ ಒದಗಿಸಲಾದ ಸೌಲಭ್ಯಗಳು | ಅನುದಾನ (ರೂ. ಕೋಟಿಗಳಲ್ಲಿ) |
|---|---|---|
| 1 | ಮೊದಲನೆ ಹಂತದ ಬಾಕಿ ಉಳಿದ ವಿದ್ಯುತ್ ಕಾಮಗಾರಿಗಳಾದ 250 ಕೆವಿ ಜನರೇಟರ್ 2000 ಟ್ರಾನ್ಸ್ ಫಾರ್ಮರ್, ಹೆಚ್.ಟಿ ಲೈನ್, ಕಂಟ್ರೋಲ್ ಪೆನೆಲ್ ಇತರೆ | 2.00 |
| 2 | 15 ಲಿಫ್ಟ್ ಗಳು | 5.00 |
| | 7 ನಂ. ಕಾಲೇಜು ಕಟ್ಟಡಕ್ಕೆ | |
| | 2 ನಂ. ಹುಡುಗರ ವಸತಿ ಗೃಹ ನಿಲಯ | |
| | 2 ನಂ. ಹುಡುಗಿಯರ ವಸತಿ ಗೃಹ ನಿಲಯ | |
| | 2 ನಂ. ವೈದ್ಯರುಗಳ ವಸತಿ ಗೃಹ ನಿಲಯ | |
| | 2 ನಂ. ಗ್ರೂಪ್ ಸಿ ಹಾಗು ಗ್ರೂಪ್ ಡಿ ವಸತಿ ಗೃಹ ನಿಲಯ | |
| 3 | ನರ್ಸ್ಸ್ ವಸತಿ ಗೃಹ ಹುಡುಗರ ಮತ್ತು ಹುಡುಗಿಯರ | 21.37 |
| 4 | ಅನಿಮಲ್ ಹೌಸ್ | 0.24 |
| 5 | ಪಾರ್ಕಿಂಗ್ ಸ್ಲಾಟ್ ದ್ವಿಚಕ್ರ ಹಾಗೂ ನಾಲ್ಕು ಚಕ್ರ ವಾಹನಗಳ ನಿಲುಗಡೆಗಾಗಿ | 0.50 |
| 6 | ಅಕೋಸ್ಟಿಕ್ ಟ್ರೀಟ್ ಮೆಂಟ್ ಲೆಕ್ಚರರ್ ಗ್ಯಾಲರಿ (3 ನಂ ಗ್ಯಾಲರಿ + ಗ್ಯಾಲರಿ). | 1.60 |
| 7 | ಅತಿಥಿ ಗೃಹ ಕಟ್ಟಡ | 2.90 |
| 8 | ಡೀನ್ ವಸತಿ ನಿಲಯ | 0.54 |
| 9 | ಎಫ್.ಎ. ಮೆಡಿಕಲ್ ಸುಪರ್ ಡೆಂಟ್, ಪ್ರಿನ್ಸಿಪಾಲ್, ಆರ್ ಎಂಒ ವಸತಿ ನಿಲಯಗಳು | 0.95 |
| 10 | ಲ್ಯಾಂಡ್ ಸ್ಕೇಪಿಂಗ್ | 0.50 |
| 11 | ಮೇಲ್ಮಟ್ಟದ ನೀರಿನ ತೊಟ್ಟಿ | 0.70 |
| 12 | ವೈದ್ಯರ ವಸತಿ ನಿಲಯಗಳು ಹೆಂಗಸರಿಗೆ<br>ವೈದ್ಯರ ವಸತಿ ನಿಲಯಗಳು ಗಂಡಸರಿಗೆ | 30.29 |
| 13 | ಕ್ರೀಡಾ ಸಂಕೀರಣ ಮತ್ತು ಜಿಮ್ | 2.00 |
| 14 | ಸೋಲಾರ್ ವಾಟರ್ ಹೀಟರ್ ಹಾಸ್ಟೆಲ್ ಗಳಿಗಾಗಿ | 1.00 |
| 15 | ಫಾಯರ್ ಪ್ರೋಟೆಕ್ಷನ್ ಕಾಲೇಜು ಕಟ್ಟಡಕ್ಕಾಗಿ | 0.75 |
| | ಒಟ್ಟು | 70.34 |
| | ಡಿಎಸ್ ಆರ್ ದರಗಳ 10% | 7.03 |
| | ಟೆಂಡರ್ ಪ್ರೀಮಿಯಮ್ | 10.51 |
| | | 87.88 |
| | ಎಸ್ ಕಲೇಶನ್ 8% ಮತ್ತು ರೌಡಿಂಗ್ ಆಫ್ | 7.12 |
| | ಒಟ್ಟು ಮೊತ್ತ | 95.00 ಕೋಟಿಗಳು |

ಭಾರತೀಯ ವೈದ್ಯಕೀಯ ಮಂಡಳಿಯ ನಿಯಮಾವಳಿಯಂತೆ ರಾಯಚೂರು ವೈದ್ಯಕೀಯ ಮಹಾವಿದ್ಯಾಲಯದ 1040 ಹಾಸಿಗೆಯುಳ್ಳ ಹೊಸ ಆಸ್ಪತ್ರೆಯ ಎಲ್ಲಾ ಕಾಮಗಾರಿಗಳು (ಲೋಕೋಪಯೋಗಿ ಇಲಾಖೆ ವರದಿಯನು ಆಧರಿಸಿ) ಈ ಕೆಳಕಂಡ ಹೆಚ್ಚಿನ ಅನುದಾನದ ಅವಶ್ಯಕತೆಯಿದೆ. ಈ ಹೆಚ್ಚಿನ ಕೆಳಕಂಡ ಅನುದಾನ ಒದಗಿಸಿದಲ್ಲಿ ಎಲ್ಲಾ ಕಾಮಗಾರಿಗಳು ಪೂರ್ಣಗೊಳ್ಳುತ್ತವೆ.

| ಕ್ರಮ ಸಂಖ್ಯೆ | ಹೆಚ್ಚಿನ ಅನುದಾನದಲ್ಲಿ ಒದಗಿಸಲಾದ ಸೌಲಭ್ಯಗಳು | ಅನುದಾನ (ರೂ. ಕೋಟಿಗಳಲ್ಲಿ ) |
|---|---|---|
| ಅ | ಸಿವಿಲ್ ಕಾಮಗಾರಿಗಳು | |
| 1 | ಬ್ಲಾಕ್ ಏ ಸಂಬಂಧ ಪಟ್ಟಂತೆ 5 ಹಾಗು 6ನೇಯ ಮಹಡಿಗಳಿಗಾಗಿ 4732 ಚ.ಮೀ ಪ್ರತಿ ಮಹಡಿಯಂತೆ | 23.00 |
| 2 | ಬ್ಲಾಕ್ ಬಿ ಕಟ್ಟಡಕ್ಕಾಗಿ (ನೆಲಮಹಡಿ ಮತ್ತು 6 ಅಂತಸ್ತು) 33268 ಚ.ಮೀ | 71.00 |
| 3 | ಲ್ಯಾಂಡ್ ಸ್ಕೇಪಿಂಗ್ | 0.50 |
| 4 | ಕಾಂಪ್ವಂಡ್ ಗೋಡೆ | 0.50 |
| 5 | ನೀರಿನ ಮೇಲ್ತೊಟ್ಟಿ ಸಂಪು ಟ್ಯಾಂಕ್ ಮತ್ತು ಸೇಪ್ಟಿಕ್ ಟ್ಯಾಂಕ್ | 1.20 |
| ಬ | ವಿದ್ಯುತ್ ಕಾಮಗಾರಿಗಳು | |
| 6 | ಜನರೇಟರ್ಸ್ | 0.50 |
| 7 | ಹೆಚ್.ಟಿ ಪವರ್ ಟ್ರಾನ್ಸ್ ಫಾರ್ಮರ್ | 2.00 |
| 8 | ಕ್ರೇಂದ್ರಿಯ ಹವಾ ನಿಯಂತ್ರಣಾಕ್ಕಾಗಿ | 2.00 |
| 9 | ನೀರು ಸರಬರಾಜು ಪಂಪುಸೆಟ್ ಹಾಗು ಹೊರಾಂಗಣ ವಿದ್ಯುತ್ ಗಾಗಿ | 0.25 |
| 10 | ಸೋಲಾರ್ ನೀರಿನ ವ್ಯವಸ್ಥೆಗಾಗಿ | 1.00 |
| | ಒಟ್ಟು ಮೊತ್ತ | 101.95 |
| | ಶೇಕಡ 10% ಅಡಾಕ್ ಹೆಚ್ಚುವರಿ ದರಪಟ್ಟಿಯಂತೆ | 10.20 |
| | | 112.15 |
| | ಎಸ್ ಕಲೇಶನ್ 8% ಮತ್ತು ಹೆಚ್ಚುವರಿ ರೋಡಿಂಗ್ ಆಫ್ | 8.14 |
| | ಒಟ್ಟು | 120.29 |
| | ಟೆಂಡರ್ ಪ್ರೀಮಿಯಮ್ | 12.71 |
| | ಒಟ್ಟು ಮೊತ್ತ | 130.00 ಕೋಟಿಗಳು |

ಉದ್ದೇಶಿತ ಕಾಮಗಾರಿಗಳನ್ನು ಪರಿಶೀಲಿಸಲಾಯಿತು. ಈ ಬಗ್ಗೆ ಸಂಸ್ಥೆಯ ನಿರ್ದೇಶಕರು ಹಾಗು ಬೋಧಕ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರ ಸಲಹೆಗಳನ್ನು ಹಾಗು ಆದ್ಯತೆಗಳನ್ನು ವಿವರಿಸಿದರು. ಮುಖ್ಯ ಆಡಳಿತಾಧಿಕಾರಿಗಳು ಈ ಕುರಿತು ಸಂಸ್ಥೆಯ ಆರ್ಥಿಕ ಸಲಹಾ ಸಮಿತಿ ಮತ್ತು ಆಡಳಿತ ಪರಿಷತ್ತಿನ ಸಭೆಯಲ್ಲಿ ನಿರ್ಣಯಗಳ ಪ್ರಕಾರ ಪರಿಶೀಲನೆ ಹಾಗು ಅವಶ್ಯಕತೆಗಳನ್ನು ಆದ್ಯತೆಗಳು ಮತ್ತು ವೆಚ್ಚ ಕಡಿತ ಬಗ್ಗೆ ವಿವರಿಸಿದರು. ಸಭೆಯಲ್ಲಿ ಈ ಬಗ್ಗೆ ಚರ್ಚೆಯಾಗಿ ಈಗಾಗಲೇ ಹೊಂದಿರುವ ಕಾಮಗಾರಿಗಳನ್ನು ಉಲ್ಲೇಖಿಸಿ ಮತ್ತು ಉದ್ದೇಶಿತ ಕಾಮಗಾರಿಗಳಲ್ಲಿ ಕೂಡಲೇ ಮತ್ತು ಅನಿವಾರ್ಯ ಕಾಮಗಾರಿ ಮಾತ್ರ ಸೇರಿಸಿ ಆಸ್ಪತ್ರೆ ಕಟ್ಟಡ ಕುರಿತ ಕಾಮಗಾರಿ ಬ್ಲಾಕ್'ಎ'ಕಟ್ಟಡ ಪೂರ್ತಿಗೊಳಿಸಲು ರಾಜೀವ್ ಗಾಂಧಿ ವಿಶೇಷತಮ ಆಸ್ಪತ್ರೆ (OPEC) ಮರಳಿ ಪಡೆಯಲು ಹಾಗು ಆಸ್ಪತ್ರೆ ಕಟ್ಟಡದ ಬ್ಲಾಕ್'ಬಿ'ಕಟ್ಟಡವನ್ನು ಸದ್ಯಕ್ಕೆ ತೆಗೆದುಕೊಳ್ಳದೆ ಮುಂದಿನ ವರ್ಷಗಳಲ್ಲಿ ತೆಗೆದುಕೊಳ್ಳಲು ನಿರ್ಧರಿಸಿ ಸರ್ಕಾರಕ್ಕೆ ಪರಿಷ್ಕೃತ ಅಂದರೆ ಮಹಾವಿದ್ಯಾಲಯದ ಬಾಕಿ ಕಾಮಗಾರಿಗಳಿಗೆ 95 ಕೋಟಿ ಬದಲು ರೂ. 78 ಕೋಟಿಗಳು ಮತ್ತು ಆಸ್ಪತ್ರಗೆ ರೂ. 135 ಕೋಟಿ ಬದಲು ರೂ. 43 ಕೋಟಿ ಕಾಮಗಾರಿಗಳನ್ನು ತೆಗೆದುಕೊಳ್ಳಲು ಹಾಗು 4ನೇ ಅರ್ಥಿಕ ಸಮಿತಿ ಮತ್ತು 10 ನೇ ಆಡಳಿತ ಮಂಡಳಿಯಲ್ಲಿ ಅನುಮೋದನೆಗೆ ಕೋರಲು ಹಾಗು ಸರಕಾರವನ್ನು ವಿನಂತಿಸಲು ಅವುಗಳ ವಿವರವನ್ನು ಮುಂದಿನ ಪುಟದಲ್ಲಿ ವಿವರಿಸಿದೆ.



ಓಪೆಕ್ ಆಸ್ಪತ್ರೆ/OPEC Hospital

ಮುಂಬರುವ ಭಾರತೀಯ ವೈದ್ಯಕೀಯ ಮಂಡಳಿಗೆ ನಿಯಮದಂತೆ ಆಸ್ಪತ್ರೆಗೆ ಬೇಕಾಗುವ ಕಟ್ಟಡಗಳು ಹಾಗು ಮಹಾವಿದ್ಯಾಲಯದ, ನೂತನ ಆಸ್ಪತ್ರೆಯ ಉದ್ದೇಶಿತ ಕಾಮಗಾರಿಗಳು ಈರೀತಿ ಇವೆ.

4 ಅ) ಮಹಾವಿದ್ಯಾಲಯದ ಉದ್ದೇಶಿತ ಕಾಮಗಾರಿಗಳು :

| ಕ್ರಮ ಸಂಖ್ಯೆ | ಕಟ್ಟಡ | ವಿಸ್ತಾರ | ಅಂದಾಜು ವೆಚ್ಚ |
|---|---|---|---|
| 1 | ಮೊದಲನೆ ಹಂತದ ಬಾಕಿ ಉಳಿದ ವಿದ್ಯುತ್ ಕಾಮಗಾರಿಗಳಾದ 250 ಕೆವಿ ಜನರೇಟರ್ 2000 ಟ್ರಾನ್ಸ್ ಫಾರ್ಮರ್, ಹೆಚ್.ಟಿ ಲೈನ್, ಕಂಟ್ರೋಲ್ ಪೆನೆಲ್ ಇತರೆ | | ರೂ. 2.00 ಕೋಟಿ |
| 2 | 15 ಲಿಫ್ಟ್ ಗಳು | 35 ಲಕ್ಷ (Each) | ರೂ. 5.00 ಕೋಟಿ |
| | 7 ನಂ. ಕಾಲೇಜು ಕಟ್ಟಡಕ್ಕೆ | | |
| | 2 ನಂ. ಹುಡುಗರ ವಸತಿ ಗೃಹ ನಿಲಯ | | |
| | 2 ನಂ. ಹುಡುಗಿಯರ ವಸತಿ ಗೃಹ ನಿಲಯ | | |
| | 2 ನಂ. ವೈದ್ಯರುಗಳ ವಸತಿ ಗೃಹ ನಿಲಯ | | |
| | 2 ನಂ. ಗ್ರೂಪ್ ಸಿ ಹಾಗು ಗ್ರೂಪ್ ಡಿ ವಸತಿ ಗೃಹ ನಿಲಯ | | |
| 3 | ಶುಸ್ರೂಷಕರ ವಸತಿ ಗೃಹಗಳು ಪುರುಷರಿಗೆ 64 ಮತ್ತು ಮಹಿಳೆಯರಿಗೆ 64 ಒಟ್ಟು 128 ವಸತಿಗೃಹಗಳು . | 11872 ಚ.ಮೀ | ರೂ. 21.37 ಕೋಟಿ |
| 4 | ಅನಿಮಲ್ ಹೌಸ್ | 135 ಚ. ಮೀ | ರೂ. 0.24 ಕೋಟಿ |
| 5 | ಪಾರ್ಕಿಂಗ್ ಸ್ಲಾಟ್ ದ್ವಿಚಕ್ರ ಹಾಗೂ ನಾಲ್ಕು ಚಕ್ರ ವಾಹನಗಳ ನಿಲುಗಡೆಗಾಗಿ | 2 No | ರೂ. 0.50 ಕೋಟಿ |
| 6 | ಅಕೋಸ್ಟಿಕ್ ಟ್ರೀಟ್ ಮೆಂಟ್ ಲೆಕ್ಚರರ್ ಗ್ಯಾಲರಿ (3 ನಂ ಗ್ಯಾಲರಿ + ಗ್ಯಾಲರಿ). | 4 No | ರೂ. 1.60 ಕೋಟಿ |
| 7 | ಅತಿಥಿ ಗೃಹ ಕಟ್ಟಡ | 1610 ಚ.ಮೀ | ರೂ. 2.90 ಕೋಟಿ |
| 8 | ಡೀನ್ ವಸತಿ ನಿಲಯ | 300 ಚ.ಮೀ | ರೂ. 0.54 ಕೋಟಿ |
| 9 | ಮುಖ್ಯ ಆಡಳಿತಾಧಿಕಾರಿಗಳು ,ಅರ್ಥಿಕ ಸಲಹೆಗಾರರು, ವೈದ್ಯಕೀಯ ಅಧೀಕ್ಷಕರು, ಪ್ರಾಂಶುಪಾಲರು, ಆರ್ ಎಂ.ಒ ವಸತಿ ನಿಲಯಗಳು | ಬೇಸ್ ಮೆಂಟ್<br>ನೆಲ ಮಹಡಿ<br>ಮೊದಲನೆ ಮಹಡಿ<br>ಎರಡನೆ ಮಹಡಿ<br>G + 2, 530 ಚ.ಮೀ | ರೂ. 0.95 ಕೋಟಿ |
| 10 | ಲ್ಯಾಂಡ್ ಸ್ಕೇಪಿಂಗ್ | | ರೂ. 0.50 ಕೋಟಿ |
| 11 | ಮೇಲ್ಮಟ್ಟದ ನೀರಿನ ತೊಟ್ಟಿ | | ರೂ. 0.70 ಕೋಟಿ |
| 12 | ವೈದ್ಯರ ವಸತಿ ನಿಲಯಗಳು ಹೆಂಗಸರಿಗೆ<br>ವೈದ್ಯರ ವಸತಿ ನಿಲಯಗಳು ಗಂಡಸರಿಗೆ<br>132 ಕೊಠಡಿಗಳು | ಬೇಸ್ ಮೆಂಟ್<br>ನೆಲ ಮಹಡಿ<br>ಮೊದಲನೆ ಮಹಡಿ<br>ಎರಡನೆ ಮಹಡಿ<br>ಮೂರನೇ ಮಹಡಿ<br>G + 3, 9268 ಚ.ಮೀ | ರೂ. 17.00 ಕೋಟಿ |
| 13 | ಕ್ರೀಡಾ ಸಂಕಿರಣ ಮತ್ತು ಜಿಮ್ | | ರೂ. 2.00 ಕೋಟಿ |
| 14 | ಸೋಲಾರ್ ವಾಟರ್ ಹೀಟರ್ ಹಾಸ್ಟೆಲ್ ಗಳಿಗಾಗಿ | | ರೂ. 1.00 ಕೋಟಿ |
| 15 | ಫಾಯರ್ ಪ್ರೋಟೆಕ್ಷನ್ ಕಾಲೇಜು ಕಟ್ಟಡಕ್ಕಾಗಿ | | ರೂ. 0.75 ಕೋಟಿ |
| | ಒಟ್ಟು | | ರೂ. 57.05 ಕೋಟಿ |
| | ಡಿಎಸ್ ಆರ್ ದರಗಳ 10% | | ರೂ. 5.705 ಕೋಟಿ |
| | ಟೆಂಡರ್ ಪ್ರೀಮಿಯಮ್ | | ರೂ. 8.55 ಕೋಟಿ |
| | | | ರೂ. 7131 ಕೋಟಿ |
| | ಎಸ್ ಕಲೇಶನ್ 8% ಮತ್ತು ರೌಡಿಂಗ್ ಆಫ್ | | ರೂ. 7.69ಕೋಟಿ |
| | ಒಟ್ಟು ಮೊತ್ತ | | ರೂ. 78.00 ಕೋಟಿಗಳು |

ಮುಂಬರುವ ಭಾರತೀಯ ವೈದ್ಯಕೀಯ ಮಂಡಳಿಗೆ ನಿಯಮದಂತೆ ಆಸ್ಪತ್ರೆಗೆ ಬೇಕಾಗುವ ಕಟ್ಟಡಗಳು ಹಾಗು ಮಹಾವಿದ್ಯಾಲಯದ, ನೂತನ ಆಸ್ಪತ್ರೆಯ ಉದ್ದೇಶಿತ ಕಾಮಗಾರಿಗಳು ಈರೀತಿ ಇವೆ.

4 ಆ) ಉದ್ದೇಶಿತ ಆಸ್ಪತ್ರೆ ಕಾಮಗಾರಿಗಳು :

| ಕ್ರಮ ಸಂಖ್ಯೆ | ವಿವರಗಳು | ಅಂದಾಜು ವೆಚ್ಚ (ರೂ. ಕೋಟಿಗಳಲ್ಲಿ) |
|---|---|---|
| ಅ | ಸಿವಿಲ್ ಕಾಮಗಾರಿಗಳು | |
| 1 | ಬ್ಲಾಕ್ ಏ ಸಂಬಂಧ ಪಟ್ಟಂತೆ 5 ಹಾಗು 6ನೇಯ ಮಹಡಿಗಳಿಗಾಗಿ 4732 ಚ.ಮೀ ಪ್ರತಿ ಮಹಡಿಯಂತೆ | ರೂ. 23.00 |
| 2 | ಲ್ಯಾಂಡ್ ಸ್ಕೇಪಿಂಗ್ | ರೂ. 0.50 |
| 3 | ಕಾಂಪ್ವಂಡ್ ಗೋಡೆ | ರೂ. 0.50 |
| 4 | ನೀರಿನ ಮೇಲ್ತೊಟ್ಟಿ ಸಂಪು ಟ್ಯಾಂಕ್ ಮತ್ತು ಸೇಪ್ಟಿಕ್ ಟ್ಯಾಂಕ್ | ರೂ. 1.20 |
| ಆ | ವಿದ್ಯುತ್ ಕಾಮಗಾರಿಗಳು | |
| 5 | ಜನರೇಟರ್ಸ್ | ರೂ. 0.50 |
| 6 | ಹೆಚ್.ಟಿ ಪವರ್ ಟ್ರಾನ್ಸ್ ಫಾರ್ಮರ್ | ರೂ. 2.00 |
| 7 | ಕ್ರೇಂದ್ರಿಯ ಹವಾ ನಿಯಂತ್ರಣಾಕ್ಕಾಗಿ | ರೂ. 2.00 |
| 8 | ನೀರು ಸರಬರಾಜು ಪಂಪುಸೆಟ್ ಹಾಗು ಹೊರಾಂಗಣ ವಿದ್ಯುತ್ ಗಾಗಿ | ರೂ. 0.25 |
| 9 | ಸೋಲಾರ್ ನೀರಿನ ವ್ಯವಸ್ಥೆಗಾಗಿ | ರೂ. 1.00 |
| | ಒಟ್ಟು ಮೊತ್ತ | ರೂ. 30.95 |
| | ಶೇಕಡ 10% ಅಡಾಕ್ ಹೆಚ್ಚುವರಿ ದರಪಟ್ಟಿಯಂತೆ | ರೂ. 3.095 |
| | | ರೂ. 34.045 |
| | ಎಸ್ ಕಲೇಶನ್ 8% ಮತ್ತು ಹೆಚ್ಚುವರಿ ರೋಡಿಂಗ್ ಆಫ್ | ರೂ. 2.955 |
| | ಒಟ್ಟು | ರೂ. 37.00 |
| | ಟೆಂಡರ್ ಪ್ರೀಮಿಯಮ್ | ರೂ. 6.00 |
| | ಒಟ್ಟು ಮೊತ್ತ | ರೂ. 43.00 ಕೋಟಿಗಳು |

| ಕ್ರಮ ಸಂಖ್ಯೆ | ಆಸ್ಪತ್ರೆಗಳ ವಿವರ | ಒಟ್ಟು ಹಾಸಿಗೆಗಳು |
|---|---|---|
| 1 | ಈಗಾಗಲೇ ಇರುವ ಬೋಧಕ ಆಸ್ಪತ್ರೆಯ ಹಾಸಿಗೆಗಳು | 250 |
| 2 | ಬ್ಲಾಕ್ ಏ ಆಸ್ಪತ್ರೆಯ ಮೊದಲನೆ ಹಂತ ಪ್ರಗತಿಯಲ್ಲಿರುವ (G + 4 floors ) | 270 |
| 3 | ಬ್ಲಾಕ್ ಏ ದಲ್ಲಿ ಎರಡನೇ ಹಂತ ಮುಕ್ತಾಯ ಗೊಂಡಾಗ (G + 6 floors) | 160 |
| 4 | ಓಪೆಕ್ ಆಸ್ಪತ್ರೆಯನ್ನು ಸರ್ಕಾರದ ಅಧೀನಕ್ಕೆ ತೆಗೆದು ಕೊಂಡರೆ | 350 |
| 5 | ಬರುವ ಶೈಕ್ಷಣಿಕ ವರ್ಷಕ್ಕೆ ದೊರೆಯುವ ಒಟ್ಟು ಹಾಸಿಗೆಗಳು | 1,030 |

ಅದುದರಿಂದ ಮಹಾವಿದ್ಯಾಲಯ ಉದ್ದೇಶಿತ ಕಾಮಗಾರಿಗಳಿಗೆ ರೂಪಾಯಿ 73 ಕೋಟಿ ಮತ್ತು ಆಸ್ಪತ್ರೆಯ ಉದ್ದೇಶಿತ ಕಾಮಗಾರಿಗಳಿಗೆ 43 ಕೋಟಿ ಒಟ್ಟ ರೂ. 121 ಕೋಟಿ ಮಂಜೂರಾತಿಗೆ ಕೋರಿದೆ. ಇವುಗಳನ್ನು ಪರಿಷ್ಕೃತ ಗೊಳಿಸಿ ಪುನ: ಸಲ್ಲಿಸಿದೆ.

ಸರ್ಕಾರದ ರಾಜೀವ್ ಗಾಂಧಿ ಸುಪರ್ ಸ್ಪಷಾಲಿಟಿ ಓಪೆಕ್ ಅಸ್ಪತ್ರೆಯನ್ನು ಈ ಹಿಂದೆ ಮದ್ರಾಸಿನ ಅಪೋಲೋ ಖಾಸಗಿ ಆಸ್ಪತ್ರೆಗೆ ವಹಿಸಿಕೊಡಲಾಗಿತ್ತು. ಅದನ್ನು ಮರಳಿ ಪಡೆದರೆ ಕೂಡಲೇ 350ಹಾಸಿಗೆಯ ಆಸ್ಪತ್ರೆ ನಮಗೆ ಲಭ್ಯವಾಗಿ ಭಾರತೀಯ ವೈದ್ಯಕೀಯ ಮಂಡಳಿಗೆ ಬೇಕಾದ ತುರ್ತು ಅವಶ್ಯಕತೆ ಪೂರೈಸಲು ಅನುಕೂಲವಾಗುತ್ತದೆ. ಅದುದರಿಂದ ಈ ಬಗ್ಗೆ ಕ್ರಮಕ್ಕೆ ಕೋರಿದ್ದು, ಸರಕಾರದ ಹಂತದಲ್ಲಿದೆ. ಈ ಕುರಿತು ತ್ವರಿತ ಕ್ರಮಕ್ಕೆ ಸರಕಾರವನ್ನು ವಿನಂತಿಸಲಾಯಿತು.

ವೈದ್ಯಕೀಯ ಆಸ್ಪತ್ರೆ ಬ್ಲಾಕ್ ಎ ದಲ್ಲಿ ನೆಲಮಹಡಿ ಮತ್ತು ಒಂದನೇ ಮಹಡಿ ಕಾಮಗಾರಿ ಪೂರ್ತಿಯಾಗಿದ್ದು, ಬಾಕಿ ಕೆಲಸ ಪ್ರಗತಿಯಲ್ಲಿದೆ. ಈ ಕಾಮಗಾರಿಯಲ್ಲಿ ಒಟ್ಟು 430 ಹಾಸಿಗೆಯ ಸೌಲಭ್ಯವಾಗುತ್ತದೆ. ಇದರಲ್ಲಿ ಒಟ್ಟು ಆರು ಮಹಡಿ ಗಳಿವೆ. ಈ ಕಟ್ಟಡದ ಒಟ್ಟು ಕ್ಷೇತ್ರ 274057 ಚದರ ಅಡಿ ಆಗುತ್ತವೆ. ಈ ನೂತನ ಆಸ್ಪತ್ರಗೆ ಈಗಾಗಲೇ 1411.87 ಲಕ್ಷಗಳು ಪಾವತಿಯಾಗಿದ್ದು ಭೂಸ್ವಾದಿನ ವೆಚ್ಚ ರೂಪಾಯಿ 2.034 ಲಕ್ಷ ಆಗಿರುತ್ತದೆ. ಎ ಬ್ಲಾಕಿನ ಬಾಕಿ ಕಾಮಗಾರಿಗೆ ರೂ. 43.00 ಕೋಟಿ ಮಂಜೂರಾತಿಗೆ ಸರ್ಕಾರವನ್ನು ವಿನಂತಿಸಲಾಯಿತು.

ಕೊನೆಯದಾಗಿ ನಿರ್ದೇಶಕರು ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು

ಸದಸ್ಯ ಕಾರ್ಯದರ್ಶಿ,
ಕಟ್ಟಡ ಕಾಮಗಾರಿ ಸಮಿತಿ, ಹಾಗು
ಮುಖ್ಯ ಆಡಳಿತಾಧಿಕಾರಿಗಳು
ರಿಮ್ಸ , ರಾಯಚೂರು.

ಅಧ್ಯಕ್ಷರು
ಕಟ್ಟಡ ಕಾಮಗಾರಿ ಸಮಿತಿ, ಹಾಗು
ನಿರ್ದೇಶಕರು
ರಿಮ್ಸ್, ರಾಯಚೂರು